# ಗ್ರಂಥಾಲಯ: ಪ್ರಾಥಮಿಕ ಶಾಲೆಯ ಪ್ರಮುಖ ಕೇಂದ್ರ ಬಿಂದು


ದಿನೇಶ್ ಪಟೇಲ್

ಶಾಲೆಗಳಲ್ಲಿ ಕಲಿಯಲು ಸ್ವತಂತ್ರ ಅವಕಾಶಗಳನ್ನು ನೀಡಿದರೆ ಮಕ್ಕಳು ಚೆನ್ನಾಗಿ ಕಲಿಯುತ್ತಾರೆ. ಅವರು ತಮ್ಮ ಅನುಭವಗಳು ಮತ್ತು ವಿವಿಧ ರೀತಿಯ ಸೃಜನಶೀಲ ಚಟುವಟಿಕೆಗಳ ಮೂಲಕ ತಮ್ಮ ಸುತ್ತಲಿನ ಪ್ರಪಂಚವನ್ನು ತಿಳಿದುಕೊಳ್ಳುವ ಕಲಿಕೆಯ ಪ್ರಕ್ರಿಯೆಯ ಭಾಗವಾಗುತ್ತಾರೆ. ಈ ಪ್ರಕ್ರಿಯೆಯಲ್ಲಿ ಯಾವುದೇ ಅಡ್ಡಿಗಳಿಲ್ಲದಿದ್ದಲ್ಲಿ ಅವರನ್ನು ಯಾವುದೇ ರೀತಿಯಲ್ಲಿ ಆಕರ್ಷಿಸುವ ಎಲ್ಲದರೊಂದಿಗೆ ಸಂಪರ್ಕ ಸಾಧಿಸಲು ಅವರು ಬಯಸುತ್ತಾರೆ. ಅವರು ಸ್ವಭಾವತಃ ಕುತೂಹಲಿಗಳಾಗಿರುವುದರಿಂದ, ಅವರು ಕಾಣುವ ಯಾವುದೇ ಹೊಸ, ವಿಶಿಷ್ಟ ಅಥವಾ ವಿಚಿತ್ರವಾದ ವಿಷಯದ ಬಗ್ಗೆ ಎಲ್ಲವನ್ನೂ ತಿಳಿದುಕೊಳ್ಳಲು ಬಯಸುತ್ತಾರೆ. ಇದು ಏಕೆ ಹೀಗೆ ಕಾಣುತ್ತದೆ? ವಸ್ತುಗಳ ನೋಟ, ಆಕಾರ ಮತ್ತು ಸ್ವಭಾವದ ಬಗ್ಗೆ ಅವರು ಕುತೂಹಲ ಹೊಂದಿರುತ್ತಾರೆ. ಈ ಕುತೂಹಲ ಅವರನ್ನು ಇನ್ನಷ್ಟು ಕಲಿಯುವಂತೆ ಮಾಡುತ್ತದೆ. ತಿಳಿದೋ ತಿಳಿಯದೆಯೋ ನಾವು ಅವರ ಕುತೂಹಲವನ್ನು ನಿರ್ಲಕ್ಷಿಸಿದಾಗ ಸಮಸ್ಯೆಗಳು ಉದ್ಭವಿಸುತ್ತವೆ. ಬಹುಶಃ ಇದು ಅವರು ತಿಳಿದುಕೊಳ್ಳಬೇಕು ಎಂದು ನಾವು ಭಾವಿಸುವ ನಮ್ಮದೇ ಅಸ್ಪಷ್ಟತೆಯಿಂದ ಹುಟ್ಟಿಕೊಂಡಿರಬಹುದು.

ಮಧ್ಯಪ್ರದೇಶದ ದೇವಾಸ್, ಉಜ್ಜಯಿನಿ, ಹೋಶಂಗಾಬಾದ್, ಹರ್ದಾ ಮತ್ತು ಬೇತುಲ್ ನ ಕೆಲವು ಸರ್ಕಾರಿ ಶಾಲೆಗಳಲ್ಲಿ *ಏಕಲವ್ಯ* ಎಂಬ ಒಂದು ಯೋಜನೆಯನ್ನು ಪ್ರಾರಂಭಿಸಿದ್ದು, ಇದರಲ್ಲಿ ನಾವು ಗ್ರಂಥಾಲಯಗಳನ್ನು ನಿರ್ವಹಿಸುತ್ತೇವೆ. ಸಕ್ರಿಯ ಮತ್ತು ಸೃಜನಶೀಲ ಗ್ರಂಥಾಲಯವನ್ನು ನಡೆಸುವ ನನ್ನ ಅನುಭವವು ಮಕ್ಕಳು ಇದರ ಮೂಲಕ ಬಹಳಷ್ಟು ಕಲಿಯುತ್ತಾರೆ ಎಂದು ಹೇಳುತ್ತದೆ. ಒಳ್ಳೆಯ ಗ್ರಂಥಾಲಯವು ಮಗುವಿಗೆ ಒಳ್ಳೆಯ ವ್ಯಕ್ತಿಯಾಗಲು ಮುಖ್ಯವಾದ ಎಲ್ಲವನ್ನೂ ಕಲಿಸುತ್ತದೆ, ಮತ್ತು ಮಕ್ಕಳು ಕಲಿಯುವ ಮತ್ತು ಪರಸ್ಪರ ಸಹಾಯ ಮಾಡುವ ಸ್ಥಳ ಎಂದು ನಾನು ಹೇಳಿದರೆ ಅದು ಅತಿಶಯೋಕ್ತಿಯಾಗುವುದಿಲ್ಲ. ಇಲ್ಲಿ ಅವರು ತಮಗೆ ಬೇಕಾದುದನ್ನು ಶೋಧಿಸಲು ಸಂಪೂರ್ಣ ಸ್ವಾತಂತ್ರ್ಯವನ್ನು ಪಡೆಯುತ್ತಾರೆ. ಅವರು ತಮ್ಮ ಜೀವನ ಕಥೆಗಳನ್ನು ಚರ್ಚೆಗಳಲ್ಲಿ ತರುತ್ತಾರೆ ಮತ್ತು ಅವರು ಪುಸ್ತಕಗಳಲ್ಲಿ ಓದಿದ ಕಥೆಗಳ ಆಧಾರದ ಮೇಲೆ ಹೊಸ ಕಥೆಗಳನ್ನು ನೇಯುತ್ತಾರೆ. ಅವರು ತಮ್ಮ ಸುತ್ತಲಿನ ಪರಿಸರದಿಂದ ಪಡೆಯುವ ಎಲ್ಲ ಅನುಭವಗಳನ್ನು ಈ ಕಥೆಗಳಲ್ಲಿ ಹೆಣೆಯುತ್ತಾರೆ. ಅನಂತರ, ಸಂಪೂರ್ಣವಾಗಿ ತಮ್ಮನ್ನು ಅರ್ಪಿಸಿಕೊಳ್ಳುವ ಸಂತೋಷದಾಯಕ ರೀತಿಯಲ್ಲಿ, ಈ ಕಥೆಗಳನ್ನು ಇತರರೊಂದಿಗೆ ಹಂಚಿಕೊಳ್ಳುತ್ತಾರೆ. ಅವುಗಳನ್ನು ಕೇಳುವ ಹೊರತು ವ್ಯಕ್ತಿಯು ಅವು ಬಹು ಸಂತೋಷಕರವಾಗಿರುತ್ತವೆಂದು ನಂಬಲಾರರು!

ಗ್ರಂಥಾಲಯವು ಆಸಕ್ತಿದಾಯಕ ಮತ್ತು ಆಕರ್ಷಕ ಸ್ಥಳವಾಗಿದ್ದು, ಮಕ್ಕಳು ಪುಸ್ತಕಗಳೊಡನೆ ಸ್ನೇಹ ಸಂಪಾದಿಸುತ್ತಾರೆ ಮತ್ತು ತಮ್ಮ ಜ್ಞಾನವನ್ನು ತಾವೇ ಮುಕ್ತವಾಗಿ ಕಟ್ಟಿಕೊಳ್ಳುತ್ತಾರೆ. ಓದುವುದು, ಚಿತ್ರ

ಬಿಡಿಸುವುದು, ನಾಟಕ, ಫಝಲ್ ಬಿಡಿಸುವುದು, ಕ್ರೀಡೆ, ಕರಕುಶಲ ಕೌಶಲಗಳು ಮತ್ತು ಇತರ ಚಟುವಟಿಕೆಗಳಲ್ಲಿ ಅವರ ಸಾಮರ್ಥ್ಯವನ್ನು ಅಭಿವೃದ್ಧಿಪಡಿಸುವಲ್ಲಿ ಈ ದೃಢವಾದ ಸಂಬಂಧವು ಪ್ರಮುಖ ಪಾತ್ರವನ್ನು ವಹಿಸುತ್ತದೆ. ನಮ್ಮ ಗ್ರಂಥಾಲಯ ಯೋಜನೆಯಲ್ಲಿ, ಮಕ್ಕಳು ಪುಸ್ತಕಗಳನ್ನು  ಎರವಲು ಪಡೆಯುವ ಮತ್ತು ಹಿಂದಿರುಗಿಸುವ ಪ್ರಕ್ರಿಯೆ, ಅವುಗಳ ನಿರ್ವಹಣೆ ಮುಂತಾದ  ಇಂಥ ಹಲವಾರು ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳುತ್ತಾರೆ. ಶಿಕ್ಷಕರು ಮತ್ತು ಹಿರಿಯ ಸ್ವಯಂಸೇವಕರು, ಹೆಚ್ಚಾಗಿ  ಪ್ರೌಢಶಾಲಾ ಹಂತದ ವಿದ್ಯಾರ್ಥಿಗಳು, ಈ ಕೆಲಸಗಳಲ್ಲಿ ಅವರಿಗೆ ಸಹಾಯ ಮಾಡುತ್ತಾರೆ.





ರಾಹುಲ್ ಅನಿಯಾ, 6 ನೆ ತರಗತಿ, ಬೋರ್ಖೇಡ ಗ್ರಾಮ, ದೇವಾಸ್

ನಮ್ಮ ಅನುಭವದಲ್ಲಿ, ಶಾಲಾ ಗ್ರಂಥಾಲಯಗಳಲ್ಲಿ ಮಕ್ಕಳೊಂದಿಗೆ ಔಪಚಾರಿಕವಾಗಿ ಕೆಲಸ ಮಾಡುವಾಗ ಅನೇಕ ಆಸಕ್ತಿದಾಯಕ ವಿಷಯಗಳು ಕಂಡು ಬಂದವು. ವಿದ್ಯಾರ್ಥಿಗಳು ಭಿತ್ತಿಪತ್ರಿಕೆಗೆ ಬರೆಯತೊಡಗಿದಾಗ ಅವರ ಸೃಜನಶೀಲತೆಯ ಅರಿವಾಯಿತು. ಅವರು ಹಲವಾರು ಆಕರ್ಷಕ ಅನುಭವಗಳನ್ನು ಹೊಂದಿದ್ದರು ಮತ್ತು ಅವುಗಳ ಬಗ್ಗೆ ಸ್ಪಷ್ಟವಾಗಿ ಬರೆದಿದ್ದರು. ಮಕ್ಕಳ ಭಾಷಾ ಕೌಶಲವನ್ನು ಹೆಚ್ಚಿಸಲು ಓದು-ಬರಹದ ಚಟುವಟಿಕೆಗಳಿಗೆ ಹೆಚ್ಚಿನ

ಅವಕಾಶಗಳನ್ನು ಒದಗಿಸುವುದು ಬಹಳ ಮುಖ್ಯ. ಇದರಿಂದ ಅವರು ತಮ್ಮ ದೃಷ್ಟಿಕೋನವನ್ನು ಮುಕ್ತವಾಗಿ ವ್ಯಕ್ತಪಡಿಸಬಹುದು ಮತ್ತು ಅವರ ಕುತೂಹಲವನ್ನು  ತಣಿಸುವ ಮಾರ್ಗಗಳ ಹುಡುಕಾಟದಲ್ಲಿ ಮುಂದುವರಿಯಬಹುದು. ಮಕ್ಕಳು ತರಗತಿಯ ಒಳಗೆ ಮತ್ತು ಹೊರಗೆ ಕಲಿಕಾ ಪ್ರಕ್ರಿಯೆಯ ಭಾಗವಾಗಲು ಮತ್ತು ಶಿಕ್ಷಕರ ಸಹಾಯದಿಂದ ತಮ್ಮ ಸುತ್ತಮುತ್ತಲಿನ ಪ್ರದೇಶಗಳಿಂದ ಕಲಿಯಲು ಸಹಾಯ ಮಾಡುವುದು ಶಿಕ್ಷಣದ ನಿಜವಾದ ಉದ್ದೇಶವಾಗಿದೆ ಎಂದು ನಾವು ನಂಬುತ್ತೇವೆ.

ಶಿಕ್ಷಕರು ಮಕ್ಕಳ ಜ್ಞಾನ-ನಿರ್ಮಾಣ ಪ್ರಕ್ರಿಯೆಯನ್ನು ಕ್ರಿಯಾಶೀಲ ಮತ್ತು ಸೃಜನಾತ್ಮಕವಾಗಿ ಹೇಗೆ ಮಾಡಬಹುದು ಎಂಬುದರ ಮಹತ್ತ್ವವನ್ನು ಒತ್ತಿಹೇಳುವ ಆವಶ್ಯಕತೆಯಿದೆ. ರಾಷ್ಟ್ರೀಯ ಪಠ್ಯಕ್ರಮ ಚೌಕಟ್ಟು (ಎನ್‌ಸಿಎಫ್) 2005 ಸಹ ಸೂಚಿಸುವಂತೆ, 'ಶಾಲಾ ಗ್ರಂಥಾಲಯವನ್ನು ಬೌದ್ಧಿಕ ಸ್ಥಳವಾಗಿ ಪರಿಕಲ್ಪಿಸಬೇಕು, ಅಲ್ಲಿ ಶಿಕ್ಷಕರು, ಮಕ್ಕಳು ಮತ್ತು ಸಮುದಾಯದ ಸದಸ್ಯರು ತಮ್ಮ ಜ್ಞಾನ ಮತ್ತು ಕಲ್ಪನೆಯನ್ನು ಆಳವಾಗಿಸಲು ಮಾರ್ಗಗಳನ್ನು ಕಂಡುಕೊಳ್ಳಲು ನಿರೀಕ್ಷಿಸಬಹುದು...'




ಮಕ್ಕಳು ಬರೆದಿರುವ ಭಿತ್ತಿಪತ್ರಿಕೆ

ಈ ಕಲ್ಪನೆಯು ಹೆಚ್ಚು ಮೌಲ್ಯಯುತವಾಗಿದೆ. ಏಕೆಂದರೆ, ಶಿಕ್ಷಣ ಕ್ಷೇತ್ರದಲ್ಲಿನ ಎಲ್ಲ ಹೊಸ ಸಂಶೋಧನಾ ಅಧ್ಯಯನಗಳು ಮಕ್ಕಳು ತಮ್ಮ ಜ್ಞಾನವನ್ನು ನಿರ್ಮಿಸಿಕೊಳ್ಳುವಲ್ಲಿ ಬಹಳ ಮುಖ್ಯವಾದ ಪಾತ್ರವನ್ನು ವಹಿಸುತ್ತಾರೆ

ಎಂದು ಒತ್ತಿಹೇಳುತ್ತವೆ. ಅವರ ಅನುಭವಗಳನ್ನು ನಿರ್ಲಕ್ಷಿಸುವ ಮೂಲಕ ನಾವು ಅವರಿಗೆ ಹೆಚ್ಚಿನದನ್ನು ಕಲಿಸಲು ಸಾಧ್ಯವಿಲ್ಲ. ಅವರ ತಿಳಿವಳಿಕೆಯ ಮಟ್ಟವನ್ನು ಆಧರಿಸಿ ಅವರ ಪಾಠಗಳೊಂದಿಗೆ ಅವರ ಸಂಪರ್ಕಗಳನ್ನು ಅಭಿವೃದ್ಧಿಪಡಿಸುವ ಪ್ರಯತ್ನಗಳು ಇರಬೇಕು ಮತ್ತು ಇದನ್ನು ಪಠ್ಯಕ್ರಮದ ಮೂಲಕ ಸ್ವಲ್ಪ ಮಟ್ಟಿಗೆ ಸಾಧಿಸಬಹುದಾದರೂ, ಹೆಚ್ಚಿನ ಮಟ್ಟಿಗೆ ಅವರ ಸುತ್ತಲಿನ ಪ್ರಪಂಚದ ಮೂಲಕ ಸಂಪರ್ಕಗಳು ಏರ್ಪಡುತ್ತವೆ.

ಗ್ರಂಥಾಲಯದ ಮುಖ್ಯ ಉದ್ದೇಶವೆಂದರೆ ಮಕ್ಕಳನ್ನು ಅವರ ಪಠ್ಯಕ್ರಮವನ್ನು ಮೀರಿ ಸಾಹಿತ್ಯಕ್ಕೆ ತೆರೆದುಕೊಳ್ಳುವಂತೆ ಮಾಡುವುದು ಮತ್ತು ಅವರಲ್ಲಿ ಓದುವ ಬರೆಯುವ ಆಸಕ್ತಿಯನ್ನು ಹುಟ್ಟುಹಾಕುವುದು. ಇದರಿಂದ ಅವರು ಭಾಷೆಯ ಮೇಲೆ ಉತ್ತಮ ಹಿಡಿತವನ್ನು ಬೆಳೆಸಿಕೊಳ್ಳಬಹುದು ಮತ್ತು ಸ್ವತಃ ಜ್ಞಾನ ನಿರ್ಮಾಣದಲ್ಲಿ ಭಾಗವಹಿಸಲು ಸಾಧ್ಯವಾಗುತ್ತದೆ. ಇದನ್ನು ಮಾಡಲು, ಶಾಲೆಯಲ್ಲಿನ ವಾತಾವರಣವು ವಿವಿಧ ಸೃಜನಶೀಲ ಚಟುವಟಿಕೆಗಳ ಮೂಲಕ ಮಕ್ಕಳಿಗೆ ಕಲಿಕೆಯಲ್ಲಿ ಆಸಕ್ತಿಯನ್ನು ಉಂಟುಮಾಡಬೇಕು ಮತ್ತು ಅವರಲ್ಲಿ ನಾಯಕತ್ವದ ಸಾಮರ್ಥ್ಯವನ್ನು ಅಭಿವೃದ್ಧಿಪಡಿಸಬೇಕು.




ಅಮಿತ್ ಸಾಹು, *7 ನೆ* ತರಗತಿ

ಗ್ರಂಥಾಲಯದ ಇನ್ನೊಂದು ಉದ್ದೇಶವೆಂದರೆ ಮಕ್ಕಳು ತಮ್ಮ ದೃಷ್ಟಿಕೋನದಿಂದ ಜಗತ್ತನ್ನು ವೀಕ್ಷಿಸಲು ಪ್ರೋತ್ಸಾಹಿಸುವುದು. ಗ್ರಂಥಾಲಯ ಯೋಜನೆಯ ಮೂಲಕ ನಮ್ಮ ಗಮನವು ಮುಖ್ಯವಾಗಿ ಓದುವ ಮತ್ತು ಬರೆಯುವ ಚಟುವಟಿಕೆಗಳ ಮೇಲೆ ಕೇಂದ್ರೀಕೃತವಾಗಿತ್ತು. ಇದರಿಂದಾಗಿ ಮಕ್ಕಳು ತಮ್ಮ ಭಾಷಾ ಸಾಮರ್ಥ್ಯಗಳನ್ನು ಲಿಖಿತ ಮತ್ತು ಮೌಖಿಕವಾಗಿ ಉತ್ಕೃಷ್ಟಗೊಳಿಸಲು ಪುಸ್ತಕಗಳನ್ನು ಬಳಸಬಹುದು ಮತ್ತು ಗ್ರಂಥಾಲಯವು ಮೇಲೆ ಹೇಳಲಾದ ಎಲ್ಲ ಸೃಜನಶೀಲ ಚಟುವಟಿಕೆಗಳಿಗೆ ಕೇಂದ್ರವಾಗಬಹುದು.

ಸರ್ಕಾರಿ ಶಾಲೆಗಳಲ್ಲಿ ಗ್ರಂಥಾಲಯಗಳನ್ನು ನಡೆಸುತ್ತಿರುವ ಏಕಲವ್ಯದ ಅನುಭವವು ಗ್ರಂಥಾಲಯದ ಮೂಲಕ ಮಕ್ಕಳು ಎಷ್ಟೊಂದು ಕಲಿಯಬಹುದು ಎಂಬ ಅರಿವನ್ನು ನಮಗೆ ಮೂಡಿಸಿತು. ಇಲ್ಲಿ, ಮಕ್ಕಳ ಅಭಿಪ್ರಾಯಗಳು, ಅವರದೇ ಮಾತಿನಲ್ಲಿ:

ಜಸ್ವಾಲ್, ಏಳನೇ ತರಗತಿ, ಗಯಾಸೂರ್ ಗ್ರಾಮ: ಏಕಲವ್ಯ ಅವರ ಗ್ರಂಥಾಲಯದ ಪುಸ್ತಕಗಳಿಂದ ನಾನು ಓದಲು ಕಲಿತಿದ್ದೇನೆ. ಯಾರಿಗೂ ತಿಳಿಯದಂತೆ ಪುಸ್ತಕ ತೆಗೆದುಕೊಂಡು ಮರೆಯಲ್ಲಿ ಓದುತ್ತಿದ್ದೆ. ಅನಂತರ ನಾನು ಕ್ರಮೇಣ ಓದಲು ಕಲಿತೆ. ಇದಕ್ಕೆ ಮೊದಲು, ನನಗೆ ಓದುವುದು ಹೇಗೆಂದು ತಿಳಿದಿರಲಿಲ್ಲ.

ಗೋವಿಂದ್, ರಾಮ್ ಕುಮಾರ್, ಜಸ್ಮನ್, ರಾಕೇಶ್ ಮತ್ತು ಬ್ರಜ್ ಮೋಹನ್, ದಾಪ್ಕಾ, ಪಿಪಾರಿಯಾ ಅವರು ಮೊದಲು ತುಂಬ ಹಿಂಜರಿಕೆಯಿಂದ ಓದುತ್ತಿದ್ದರು ಎಂದು ಹೇಳಿದರು (ಗ್ರಂಥಾಲಯವನ್ನು ಪರಿಚಯಿಸಲಾಯಿತು). ಅವರು ಓದಲು ಬಹಳ ಸಮಯ ತೆಗೆದುಕೊಳ್ಳುತ್ತಿದ್ದರು ಮತ್ತು ಅವರು ಪ್ರತಿ ಪದದಲ್ಲೂ ಎಡವಿ, ಪದಗಳನ್ನು ಅಕ್ಷರಗಳಾಗಿ ಒಡೆಯುತ್ತಿದ್ದರು. ನಿಧಾನವಾಗಿ, ಅವರು ಓದಲು ಕಲಿತರು. ಗ್ರಂಥಾಲಯದಲ್ಲಿನ ಪುಸ್ತಕಗಳ ಕಥೆಗಳನ್ನು ಮತ್ತೆ ಮತ್ತೆ ಓದುವ ಮೂಲಕ ಓದುವ ಅಭ್ಯಾಸವನ್ನು ಬೆಳೆಸಿಕೊಂಡರು. ಅನಂತರ, ಅವರು ಬರೆಯುವ ಮೊದಲು ಯೋಚಿಸಲು ಕಲಿತರು ಮತ್ತು ಪುಸ್ತಕಗಳಿಂದ ಚಿತ್ರಗಳನ್ನು ಬಿಡಿಸಲು ಕಲಿತರು.


ರಾಮ್‌ಕುಮಾರ್, ದಾಪ್ಕಾ: ಗ್ರಂಥಾಲಯ ಪುಸ್ತಕಗಳು ಸಿಗದಿದ್ದಾಗ ಗಟ್ಟಿಯಾಗಿ ಓದಲು ಸಂಕೋಚಪಡುತ್ತಿದ್ದೆವು. ಈಗ ನಾವು ಆತ್ಮವಿಶ್ವಾಸದಿಂದ ತರಗತಿಯಲ್ಲಿ ಓದುತ್ತಿದ್ದೇವೆ. ಅವರು ಎರಡೂವರೆ ತಿಂಗಳಲ್ಲಿ ಓದುವುದನ್ನು ಕಲಿತು ಈಗ ಪಠ್ಯಪುಸ್ತಕಗಳನ್ನೂ ಸರಿಯಾಗಿ ಓದಬಲ್ಲರು. 'ಈಗ ನಾವು ಎಲ್ಲವನ್ನೂ ಅರ್ಥಮಾಡಿಕೊಳ್ಳುತ್ತೇವೆ' ಎನ್ನುತ್ತಾರೆ ಅವರು.

ಜಗದೀಶ್ ಪ್ರಜಾಪತಿ, ಬೋರ್ಖೇಡ: ಈ ಹಿಂದೆ ಸರಾಗವಾಗಿ ಓದಲು ಬರುತ್ತಿರಲಿಲ್ಲ. ಆದರೆ ಈಗ ನಿಧಾನವಾಗಿ ಗ್ರಂಥಾಲಯ ಪುಸ್ತಕಗಳನ್ನು ಓದಲು ಆರಂಭಿಸಿದ್ದೇನೆ. ನಾನು ಹೆಚ್ಚು ಕಥೆಗಳನ್ನು ಓದಿದ್ದೇನೆ. ಅದರೊಂದಿಗೆ ಮಾಹಿತಿ ಒದಗಿಸುವ ಪುಸ್ತಕಗಳನ್ನು ಸಹ ಓದಿದ್ದೇನೆ. ಈ ನಿದರ್ಶನಗಳು ಮಕ್ಕಳು ನಿಧಾನವಾಗಿ, ಆದರೆ ಶಾಶ್ವತವಾಗಿ, ಪುಸ್ತಕ ಪ್ರಪಂಚದೊಂದಿಗೆ ಸಂಪರ್ಕ ಹೊಂದುತ್ತಿರುವುದನ್ನು ಸೂಚಿಸುತ್ತವೆ. ಅವರು ಓದಿದ ಪುಸ್ತಕಗಳ ಹೆಸರುಗಳನ್ನು ಹೇಳಿದ ರೀತಿಯಿಂದಲೇ ಅವರು ಪುಸ್ತಕಗಳನ್ನು ಓದಿ ಆನಂದಿಸಿದ್ದಾರೆ ಎಂಬುದು ಸ್ಪಷ್ಟವಾಯಿತು. ಗ್ರಂಥಾಲಯದ ನಿಯಮಿತ ಬಳಕೆಯು ಅವರ ಓದುವ ಅಭ್ಯಾಸದಲ್ಲಿ ಕ್ರಮಬದ್ಧತೆಯನ್ನು ತಂದಿದೆ.

ಅವರು ಸಂತೋಷ ಮತ್ತು ಉತ್ಸಾಹದಿಂದ ಇದ್ದಾರೆ ಎಂಬ ಅಂಶವು ಅವರ ಕುತೂಹಲವನ್ನು ಪೋಷಿಸಲಾಗಿದೆ ಎಂಬುದರ ಖಚಿತವಾದ ಸಂಕೇತವಾಗಿದೆ. ಅವರು ಗ್ರಂಥಾಲಯವನ್ನು ಬಳಸಲು ಪ್ರಾರಂಭಿಸಿದಾಗಿನಿಂದ ನಮ್ಮೊಂದಿಗೆ ಅವರ ಸಂವಹನವು ಮೊದಲಿಗಿಂತ ಹೆಚ್ಚು ಸ್ವಾಭಾವಿಕ ಮತ್ತು ಸೌಹಾರ್ದಯುತವಾಗಿದೆ. ಅವರು ಶಿಕ್ಷಕರೊಂದಿಗೆ ಮಾತನಾಡುತ್ತಿರುವಂತೆ ತೋರುತ್ತಿರಲಿಲ್ಲ ಬದಲಿಗೆ, ಸ್ನೇಹಿತರೊಂದಿಗೆ ಮಾತನಾಡುತ್ತಿದ್ದಾರೆ ಎಂಬಂತಿತ್ತು. ಕೆಲವು ಮಕ್ಕಳು ಹೇಳಿದಂತೆ, 'ಸಾರ್, ನೀವು ನಮ್ಮ ಮಾತು ಕೇಳುತ್ತೀರಾ, ನಾವು ಚೇಷ್ಟೆ ಮಾಡಿದರೂ ನಮ್ಮನ್ನು ಬೈಯುವುದಿಲ್ಲ. ನಾವು ತುಂಬ ಇಷ್ಟಪಡುವ ಎಷ್ಟೋ ವಿಷಯಗಳನ್ನು ನೀವು ಕಲಿಸುತ್ತೀರಿ.'

ಗ್ರಂಥಾಲಯವನ್ನು ಬಳಸಿದುದರ ಪ್ರಮುಖ ಫಲಿತಾಂಶವೆಂದರೆ ಈಗ ಮಕ್ಕಳು ನಿಧಾನಕ್ಕೆ ಬರೆಯುವ ಪ್ರಕ್ರಿಯೆಯತ್ತ ಸಾಗಲು ಪ್ರಾರಂಭಿಸಿದ್ದಾರೆ. ಬರವಣಿಗೆ ಮತ್ತು ಚಿತ್ರಕಲೆ ಸಂತೋಷಕರ ಮತ್ತು ಆಸಕ್ತಿದಾಯಕ ಎಂದು ಅವರು ಅರಿತುಕೊಂಡಿದ್ದಾರೆ. ಈ ಮಕ್ಕಳು ಉತ್ಸಾಹ ಮತ್ತು ಲವಲವಿಕೆಯನ್ನು ವ್ಯಕ್ತಪಡಿಸುತ್ತಾರೆ. ಅವರಲ್ಲಿ ಆತ್ಮವಿಶ್ವಾಸವೂ ಹೆಚ್ಚಿದೆ. ಬಹುಶಃ ಇದಕ್ಕೆ ಮುಖ್ಯ ಕಾರಣವೆಂದರೆ ನಾವು ಅವರ ಅನುಭವಗಳನ್ನು ಬರೆಯಲು ಹೇಳಿದಾಗ ಅವರು ಬರೆದ ವಿವಿಧ ರೀತಿಯ ಬರವಣಿಗೆಗಳನ್ನು, ಅವರನ್ನು ಸ್ವೀಕರಿಸಿದಂತೆಯೇ ಸ್ವೀಕರಿಸಿದ್ದೇವೆ. ನಾವು ಅವರನ್ನು ಟೀಕಿಸಲಿಲ್ಲ. ಬದಲಾಗಿ ಅವರ ಕೆಲಸವನ್ನು ಹೊಗಳಿದೆವು ಮತ್ತು ಅವರ ಬೆನ್ನು ತಟ್ಟಿದೆವು. ಅದರಿಂದಾಗಿ ಈ ಮಕ್ಕಳು ಯಾವುದೇ ಸೃಜನಶೀಲ ಕೆಲಸವನ್ನು ಮಾಡಲು ಯಾವಾಗಲೂ ಉತ್ಸಾಹದಿಂದ

ಇರುತ್ತಾರೆ. ಅವರು ಯಾವಾಗ ಮತ್ತು ಏನು ಮಾಡಬೇಕೆಂದು ಬಯಸಿದರೂ ಅದನ್ನು ಮಾಡುವ ಸ್ವಾತಂತ್ರ್ಯ ಅವರಿಗಿತ್ತು ಮತ್ತು ಅವರು ಏನನ್ನಾದರೂ ಮಾಡಲು ಬಯಸದಿದ್ದರೆ, ಅವರು ಅದನ್ನು ಮಾಡದಿರಲು ಸ್ವತಂತ್ರರು. ನಮ್ಮ ಶಾಲಾ ವ್ಯವಸ್ಥೆಯಲ್ಲಿ ಈ ರೀತಿಯ ಸ್ವಾತಂತ್ರ್ಯಕ್ಕೆ ಬಹಳ ಕಡಮೆ ಅವಕಾಶವಿದೆ. ಆದರೆ ಶ್ರದ್ಧೆ ಮತ್ತು ನಿರಂತರ ಪ್ರಯತ್ನಗಳನ್ನು ಮಾಡಿದರೆ, ಸರ್ಕಾರಿ ಶಾಲೆಗಳಲ್ಲಿಯೂ ಮಕ್ಕಳ ವಿವಿಧ ಸೃಜನಶೀಲ ಸಾಧ್ಯತೆಗಳಿಗೆ ಬಾಗಿಲು ತೆರೆಯಬಹುದು. ಅವರ ಜೊತೆ ಕೆಲಸ ಮಾಡಿದ ನನ್ನ ಅನುಭವ ಇದು.




ಸೋನಾ ಅಹಿರ್ವಾರ್ 6 ನೆ ತರಗತಿ

ದೇವಾಸ್ನ ಪೊನಸಾ ಗ್ರಾಮದ ಮಾಧ್ಯಮಿಕ ಶಾಲಾ ಶಿಕ್ಷಕಿ ಬಬಿತಾ ಜೈಸ್ವಾಲ್, 'ಮಕ್ಕಳು ನಿಮ್ಮ ಬಹಳಷ್ಟು ಪುಸ್ತಕಗಳನ್ನು ಓದಿದ್ದಾರೆ. ನಾನು ಒಬ್ಬಂಟಿಯಾಗಿದ್ದಾಗಲೆಲ್ಲಾ, ಅವರ ಮನೆಕೆಲಸವನ್ನು ಮುಗಿಸಿದ ಅನಂತರ ನಾನು ಅವರಿಗೆ ಗ್ರಂಥಾಲಯದ ಪುಸ್ತಕಗಳನ್ನು ನೀಡುತ್ತೇನೆ. ಇದರಿಂದ ಅವರಲ್ಲಿ ಓದುವ ಆಸಕ್ತಿ ಹೆಚ್ಚಿದೆ. ಅನೇಕ ಮಕ್ಕಳು ಹೆಚ್ಚಿನ ಪುಸ್ತಕಗಳನ್ನು ಓದಿದ್ದಾರೆ ಮತ್ತು ಹೆಚ್ಚಿನದನ್ನು ಕೇಳುತ್ತಿದ್ದಾರೆ' ಎಂದು ನಮಗೆ ಹೇಳಿದರು.

ಗಯಾಸೂರ್ ಮತ್ತು ಬೊಲಾಸಾ, (ದೇವಾಸ್), ಸೆಮಾಲಿಯಾ ನಾಸರ್ ಮತ್ತು ಮುಂಜಾ ಖೇರಿ, (ಉಜ್ಜಯಿನಿ), ದಬ್ಕಾ, (ಹೋಶಂಗಾಬಾದ್) ಮತ್ತು ಸಿಲ್ಪತಿ ಮತ್ತು ಭುನ್ನಾಸ್, ಶಾಹಪುರ್ (ಬೇತುಲ್) ಶಾಲೆಗಳ ಶಿಕ್ಷಕರು ಸಹ ತಮ್ಮ ಮಕ್ಕಳು ಗ್ರಂಥಾಲಯದ ಪುಸ್ತಕಗಳನ್ನು ಓದಿದರು ಮತ್ತು ಮನೆಗೆ ಕೂಡಾ ತೆಗೆದುಕೊಂಡು ಹೋದರು ಎಂದು ಹೇಳಿದರು. ಈ ಮೂವತ್ತೆಂಟು ಮಕ್ಕಳಲ್ಲಿ, ಹದಿಮೂರು ಮಕ್ಕಳು ತಮ್ಮ ಒಡಹುಟ್ಟಿದವರು ಮತ್ತು ಇತರ ಕುಟುಂಬ ಸದಸ್ಯರು ಮನೆಯಲ್ಲಿ ಪುಸ್ತಕಗಳನ್ನು ಓದುತ್ತಾರೆ ಎಂದು ಹೇಳಿದರು. ಉಜ್ಜಯಿನಿ ಪ್ರದೇಶದ ಮೂರು ಹಳ್ಳಿಗಳ ಮಕ್ಕಳು ತಮ್ಮ ಶಿಕ್ಷಕರು ಪುಸ್ತಕಗಳನ್ನು ಓದುತ್ತಾರೆ ಮತ್ತು ಅನಂತರ ಅದರ ಆಧಾರದ ಮೇಲೆ ಆಟಗಳನ್ನು ಆಡಿಸುತ್ತಾರೆ  ಮತ್ತು ಚಟುವಟಿಕೆಗಳನ್ನು ಮಾಡುತ್ತಾರೆ ಎಂದು ಹಂಚಿಕೊಂಡರು.

ಎಲ್ಲ ಮಕ್ಕಳ ಪರವಾಗಿ ಮಾತನಾಡಿದ ಮಗುವೊಂದು ಗ್ರಂಥಾಲಯ ಯೋಜನೆಯ ಬಗ್ಗೆ ಹೀಗೆ ಹೇಳಿತು, 'ಪುಸ್ತಕಗಳು ಸಿಗದಿದ್ದರೆ ನಾವು ವೇಗವಾಗಿ ಓದಲು, ಆಟಿಕೆಗಳನ್ನು ಮಾಡಲು, ಬರೆಯಲು, ಒಳ್ಳೆಯ ಕಥೆಗಳನ್ನು ಓದಲು, ಸಂಭಾಷಣೆ ಅಥವಾ ಒಗಟುಗಳನ್ನು ಕಲಿಯಲು ಸಾಧ್ಯವಾಗುತ್ತಿರಲಿಲ್ಲ. ಪುಸ್ತಕಗಳಿಂದಾಗಿ ನಾವು ಓದುವುದು ಮತ್ತು ಮಾತನಾಡುವುದನ್ನು ಕಲಿತಿದ್ದೇವೆ. ನಾವು ಆಸಕ್ತಿಯಿಂದ ಏನನ್ನಾದರೂ ಕಲಿತಾಗ, ನಾವು ಅದನ್ನು ಆನಂದಿಸುತ್ತೇವೆ ಮತ್ತು ಸುಲಭವಾಗಿ ಕಲಿಯಲು ಸಾಧ್ಯವಾಗುತ್ತದೆ. ನಾವು ಕಾಡಿನಲ್ಲಿ ಓಡಾಡುವಾಗ ಓದಿದ ಕಥೆಗಳಿಂದ ಹಾಡುಗಳನ್ನು ರಚಿಸುತ್ತೇವೆ. ಹೊಸ ಚಿತ್ರಗಳನ್ನು ಬಿಡಿಸಲು, ಆಟವಾಡಲು, ಕೆಟ್ಟದ್ದು- ಒಳ್ಳೆಯದು ಎಂಬುದನ್ನು ತಿಳಿದುಕೊಳ್ಳಲು ನಾವು ಕಲಿತಿದ್ದೇವೆ. ಕೆರೆ ಅಥವಾ ಕೊಳದಲ್ಲಿ ಸ್ನಾನ ಮಾಡಬೇಡಿ ಅಥವಾ ಬಟ್ಟೆ ಒಗೆಯಬೇಡಿ. ಇದರಿಂದ ನೀರು ಕೊಳಕು ಆಗುತ್ತದೆ ಎಂದು ಗುಡ್ಡಿ ಕಥೆ ನಮಗೆ ಕಲಿಸಿತು. ವೇಗವಾಗಿ ಬರೆಯುವ ಹವ್ಯಾಸ ಬೆಳೆಸಿಕೊಳ್ಳಲು ಭಿತ್ತಿಪತ್ರಿಕೆ ನೆರವಾಯಿತು' ಎಂದಳು.

ಮತ್ತೊಬ್ಬರು ವಿನಂತಿಸಿದರು, 'ದಯವಿಟ್ಟು ಹೆಚ್ಚು ಒಳ್ಳೆಯ ಪುಸ್ತಕಗಳನ್ನು ತನ್ನಿರಿ. ಏಕೆಂದರೆ, ಅಪ್ಪ ಕೆಲವೊಮ್ಮೆ ಅವುಗಳನ್ನು ಓದುತ್ತಾರೆ.' ಮತ್ತೊಬ್ಬ ಹೆಮ್ಮೆಯಿಂದ, 'ಹಾವು ಕಡಿತಕ್ಕೆ ಚಿಕಿತ್ಸೆ ಲಭ್ಯವಿದೆ ಎಂದು ನಾನು ನನ್ನ ಅಣ್ಣನಿಗೆ ಹೇಳಿದೆ ಮತ್ತು ಶಾಲೆಯ ಗ್ರಂಥಾಲಯದಲ್ಲಿ ಅದರ ಬಗ್ಗೆ  ತಿಳಿಸುವ ಪುಸ್ತಕವಿದೆ ಎಂದೆ. ನನ್ನ  ಅಣ್ಣನು ಅದನ್ನು  ಓದಲು ಮನೆಗೆ ಪುಸ್ತಕ  ತಂದುಕೊಡಲು ಹೇಳಿದ್ದಾನೆ ' ಎಂದನು.

ಮಕ್ಕಳ ಈ ಅನುಭವಗಳಲ್ಲಿ ವೈವಿಧ್ಯವನ್ನು ಕಾಣಬಹುದು. ಅವರು ವಿವಿಧ ಗ್ರಂಥಾಲಯ ಪುಸ್ತಕಗಳೊಂದಿಗೆ ಸಕ್ರಿಯವಾಗಿ ಬಾಂಧವ್ಯವನ್ನು   ಬೆಳೆಸಿಕೊಳ್ಳುತ್ತಿದ್ದಾರೆ. ಇದು ಅವರ ಶಬ್ದಭಂಡಾರವನ್ನು ಬಹಳವಾಗಿ ಹೆಚ್ಚಿಸಿದೆ ಎಂಬುದು ಅವರ ಸಂಭಾಷಣೆಗಳಿಂದ ಸ್ಪಷ್ಟವಾಗಿದೆ. ಯಾರೂ ಕಲಿಸದಿದ್ದರೂ, ಪುಸ್ತಕಗಳ ಸಹಾಯದಿಂದ ಅವರು ಇನ್ನೂ ಅನೇಕ ವಿಷಯಗಳನ್ನು ತಾವಾಗಿಯೇ ಕಲಿಯಬಹುದು ಎಂಬುದನ್ನು  ಅವರು ಅರ್ಥಮಾಡಿಕೊಳ್ಳಲು

ಪ್ರಾರಂಭಿಸಿದ್ದಾರೆ. ಮಕ್ಕಳು ಪುಸ್ತಕಗಳ ಮೂಲಕ ಕಲಿಯುವಾಗ ಅವರ ಸಂತೋಷಕ್ಕೆ ಮಿತಿಯಿಲ್ಲ. ಅವರು ಅದನ್ನು ನಮ್ಮೊಂದಿಗೆ ಮತ್ತು ಶಾಲೆಯಲ್ಲಿ ತಮ್ಮ ಶಿಕ್ಷಕರೊಂದಿಗೆ ಹಂಚಿಕೊಳ್ಳುತ್ತಾರೆ.

ಮಕ್ಕಳಿಗೆ ಯಾವ ಪುಸ್ತಕವನ್ನು ಇಷ್ಟಪಡಬೇಕು ಅಥವಾ ಯಾವುದನ್ನು ಓದಬೇಕು ಎಂದು ಹೇಗೆ ತಿಳಿಯುತ್ತದೆ? ಹೆಚ್ಚಿನ ಮಕ್ಕಳು ಹೇಳಿದರು, ಅವರು ಮೊದಲು ಶೀರ್ಷಿಕೆಯನ್ನು ನೋಡುತ್ತಾರಂತೆ ಮತ್ತು ಅವರಿಗೆ ಅದು ಇಷ್ಟವಾಗದಿದ್ದರೆ ಕೆಲವು ಪುಟಗಳನ್ನು ತಿರುವಿ ಹಾಕುತ್ತಾರೆ ಮತ್ತು ಅದು ಚೆನ್ನಾಗಿದ್ದರೆ, ಅದನ್ನು ಓದುತ್ತಾರಂತೆ. ಇಲ್ಲದಿದ್ದರೆ, ಅದನ್ನು ಮತ್ತೆ ಅಲ್ಲೇ ಇಡುತ್ತೇವೆ ಎಂದು ಉತ್ತರಿಸಿದರು. ಕೆಲವೊಮ್ಮೆ, ಅವರು ಪುಸ್ತಕದಲ್ಲಿರುವ ಚಿತ್ರಗಳನ್ನು ನೋಡಿ ನಿರ್ಧರಿಸುತ್ತಾರೆ. ನಿಸ್ಸಂಶಯವಾಗಿ, ಪುಸ್ತಕದ ಕಥಾವಸ್ತು, ಭಾಷೆ, ಅದರ ಚಿತ್ರಗಳು, ವಿನ್ಯಾಸ ಮತ್ತು ರಚನೆ ಇತ್ಯಾದಿಗಳು ಅವರು ಪುಸ್ತಕವನ್ನು ಆಯ್ಕೆ ಮಾಡುವಲ್ಲಿ ಪ್ರಮುಖ ಪಾತ್ರವನ್ನು ವಹಿಸುತ್ತವೆ. ಬಣ್ಣದ ಚಿತ್ರ ಪುಸ್ತಕಗಳಿಗೆ ಆದ್ಯತೆ ಸಿಗುತ್ತದೆ.

ಈಗ ನಿಯಮಿತವಾಗಿ ಗ್ರಂಥಾಲಯದ ಚಟುವಟಿಕೆಗಳು ನಡೆಯುವುದರಿಂದ ಮತ್ತು ಮಕ್ಕಳೊಂದಿಗೆ ನಮ್ಮ ಸಂವಹನ ಮತ್ತು ತರಗತಿಯಲ್ಲಿನ ಬೋಧನಾ ವಿಧಾನವನ್ನು ನೋಡಿದಾಗಲಿಂದ, ಮಕ್ಕಳ ಬಗ್ಗೆ ಶಿಕ್ಷಕರ ಮನೋಭಾವದಲ್ಲಿ ಸಾಕಷ್ಟು ಬದಲಾವಣೆಯಾಗಿದೆ. ಅವರ ನಡವಳಿಕೆಯಲ್ಲಿ ಧನಾತ್ಮಕ ಬದಲಾವಣೆಯನ್ನು ಕಾಣಬಹುದು. ಶಿಕ್ಷಕರು ಸರ್ಕಾರಿ ಶಾಲೆಯ ಪುಸ್ತಕಗಳನ್ನು ಮಕ್ಕಳಿಗೆ ಕೊಡಲು ಪ್ರಾರಂಭಿಸಿದ್ದಾರೆ. ಮೊದಲು ಹೀಗಿರಲಿಲ್ಲ. ಶಿಕ್ಷಕರು ಪಠ್ಯಪುಸ್ತಕಗಳಲ್ಲದೆ ಇತರ ಸಾಹಿತ್ಯವನ್ನು ಓದುವ ಮೂಲಕ ಜ್ಞಾನವನ್ನು ಸಂಪಾದಿಸಲು ಆಸಕ್ತಿ ತೋರಿಸುತ್ತಿದ್ದಾರೆ. ಪಠ್ಯಪುಸ್ತಕದ ಪಾಠ ಮಾಡುವ ಸಂದರ್ಭದಲ್ಲಿ ಮಕ್ಕಳ ಅನುಭವಗಳನ್ನೂ ಸೇರಿಸುತ್ತಿದ್ದಾರೆ ಎಂದರೆ ಮಕ್ಕಳ ಕ್ರಿಯಾಶೀಲ ಭಾಗವಹಿಸುವಿಕೆಯೊಂದಿಗೆ ತರಗತಿ ಸಂವಹನ ನಡೆಸಲಾಗುತ್ತಿದೆ.

ಶಿಕ್ಷಕರು ಮಕ್ಕಳ ಕೇಂದ್ರಿತ ಶಿಕ್ಷಣವನ್ನು ಆಧರಿಸಿದ ಸಿದ್ಧಾಂತವನ್ನು ಅರ್ಥಮಾಡಿಕೊಳ್ಳುವ ಪ್ರಕ್ರಿಯೆಯತ್ತ ಸಾಗುತ್ತಿದ್ದಾರೆ. ಇದರಿಂದ ತರಗತಿಯನ್ನು ಉತ್ತಮವಾಗಿ ನಡೆಸಬಹುದು. ಎಲ್ಲ ಮಕ್ಕಳ ಸಾಮರ್ಥ್ಯವು ನಿಖರವಾಗಿ ಒಂದೇ ಮಟ್ಟದಲ್ಲಿರುವುದಿಲ್ಲ. ಹಾಗೆಯೇ ಅವರು ಅರ್ಥಮಾಡಿಕೊಳ್ಳುವ ಸಾಮರ್ಥ್ಯವು ವಿಭಿನ್ನವಾಗಿರುತ್ತದೆ ಎಂಬ ತಿಳಿವಳಿಕೆಗೆ ಇದು ಕಾರಣವಾಗಬಹುದು. ಇದು ಆಲೋಚನೆಯಲ್ಲಿ ಗಮನಾರ್ಹ ಬದಲಾವಣೆಯಾಗಿರುವುದರ ಸೂಚನೆಯಲ್ಲವೇ? ಎನ್‌ಸಿಎಫ್ 2005 ಹೇಳುವಂತೆ, ಶಿಕ್ಷಕರು ಕೇವಲ ಜ್ಞಾನದ ರವಾನೆಗಾರರಾಗಿರದೆ ಮಾರ್ಗದರ್ಶಕರ ಪಾತ್ರವನ್ನು ವಹಿಸಬೇಕು. ಆಗ ಮಾತ್ರ ಅವರು ಉತ್ತಮ ಶಿಕ್ಷಕರು ಎಂದು ಸಾಬೀತುಪಡಿಸಬಹುದು.

***

**ದಿನೇಶ್ ಪಟೇಲ್:** ಇವರು ಅಜೀಂ ಪ್ರೇಮ್‌ಜಿ ಫೌಂಡೇಶನ್ನಿನ ಹಿಂದಿ ಭಾಷಾ ಸಂಪನ್ಮೂಲ ವ್ಯಕ್ತಿ. ಮಧ್ಯಪ್ರದೇಶದ ಏಕಲವ್ಯ ಫೌಂಡೇಶನ್ನಿನ ಶಿಕ್ಷಣ ಕ್ಷೇತ್ರದಲ್ಲಿ 30 ವರ್ಷಗಳ ಕಾಲದಿಂದ ಕೆಲಸ ಮಾಡಿದ್ದಾರೆ. ಅವರ ಆಸಕ್ತಿಗಳು ಹಿಂದಿ ಸಾಹಿತ್ಯವನ್ನು ಓದುವುದು, ಸಾಹಿತ್ಯ ಮತ್ತು ಶಿಕ್ಷಣವನ್ನು ಕುರಿತು ಲೇಖನಗಳನ್ನು ಬರೆಯುವುದು ಮತ್ತು ಅಮೂರ್ತ

ವರ್ಣಚಿತ್ರಗಳನ್ನು (ರೇಖಾಂಕನ್/ರೇಖಾಚಿತ್ರ) ಮಾಡುವುದು. ಅವರನ್ನು dineshpatel13@gmail.com ಮೂಲಕ ಸಂಪರ್ಕಿಸಬಹುದು.